# ಗಂಗಾ ಆರತಿ ನೋಡಿದ ಸಂಭ್ರಮ!

**ಕುಟುಂಬ ಸಮೇತರಾಗಿ ಪ್ರವಾಸ ಹೋಗಿ ಅನೇಕ ಸ್ಥಳಗಳನ್ನು ನೋಡಿ, ಸವಿದು, ಆಸ್ವಾದಿಸಿದ ನೆನಪು ಜೀವನದಲ್ಲಿ ಎಂದಿಗೂ ಮಾಸದ ಸವಿನೆನಪಾಗಿ ಉಳಿಯುತ್ತದೆ.**

**■ ಪದ್ಮಾ ಸೀತಾರಾಂ, ಮೈಸೂರು**



ಹದಿನೆಂಟು ವರ್ಷಗಳ ಹಿಂದಿನ ನೆನಪು. ಕುಟುಂಬ ಸಮೇತರಾಗಿ ಪ್ರವಾಸ ಹೋದ ರಸಗಳಿಗೆ. ಇಂದೂ ಆ ಕ್ಷಣಗಳು ನೆನಪಿನಂಗಳದಲ್ಲಿ ಹಸಿರಾಗಿದೆ.

ಅದು 2001 ಇಸವಿ, ಮೇ ತಿಂಗಳು. ನಾವು ಐದು ಜನ. ನಾನೂ ಯಜಮಾನರು, ವಕೀಲ ಸಾಹೇಬರು, ಅವರ ಸ್ನೇಹಿತ ಅಶ್ವತ್ಥ, ನಾದಿನಿ ಕಾಂತಾ, ಭಾವ ಗೋಪಿನಾಥ, ಮೈಸೂರಿಂದ ದೂರ ಹಿಮಾಚಲ ಪ್ರದೇಶದ ಕಸೌಲಿಗೆ ಮೈಸೂರು–ದಿಲ್ಲಿ–ಅಂಬಾಲಾ ರೈಲು ಪಯಣ ಪೂರೈಸಿ 'ಕಸೌಲಿ' ವಾಯುಸೇನೆ ಛಾವಣಿಗೆ ಬಂದಿಳಿದೆವು. ಎಲ್ಲರೂ 65–70 ವರ್ಷ ದಾಟಿದ ಹಿರಿಯ ನಾಗರಿಕರೇ. ಅಲ್ಲಿ ಮಗ ಡಾಕ್ಟರ್, ದೊಡ್ಡದಾದ ಮನೆ ಮಾಡಿದ್ದ. ಓಡಾಡುವುದಕ್ಕೆ ಸ್ವಂತ ಕಾರು. ಅವನ ಆಫೀಸ್ ವೇಳೆಯಲ್ಲಿ ಸರ್ಕಾರಿ ಜೀಪು. ಹಳ್ಳಿ 'ಊಟಿ' ಯಂತಿರುವ ತಂಪು ಹವೆಯ ಕಸೌಲಿ ಕ್ಯಾಂಪಸ್‌ನಲ್ಲಿ, ಮಗ ಸೊಸೆ ಮೊಮ್ಮಕ್ಕಳ ಸಹವಾಸದಲ್ಲಿ, ಅಕ್ಕರೆ ತುಂಬಿದ ಆತಿಥ್ಯದಲ್ಲಿ ನಾಲ್ಕೈದು ದಿನ ಕಳೆದದ್ದೇ ಗೊತ್ತಾಗಲಿಲ್ಲ.

ಒಂದು ದಿನ ಕಾರಿನಲ್ಲಿ ಚಂಡೀಗಢ ಕಾಲ್ಕಾದೇವಿ, ಪಿಂಜೋರ್ ಪಾರ್ಕ್, ಮತ್ತೊಂದು ರಜಾದಿನ ಬೆಳಿಗ್ಗೆಯಿಂದ ರಾತ್ರಿವರೆಗೆ ಟಾಟಾ ಸುಮೋದಲ್ಲಿ ನೈನಾದೇವಿ ಬೆಟ್ಟ, ಗೋವಿಂದಸಾಗರ ಜಲಾಶಯ, ಬಾಕ್ರಾ ನಂಗಲ್ (ಸತ್ಲಜ್‌ನದಿ ) ಅಣೆಕಟ್ಟು. ವಾಪಾಸ್ ಬರ್ತಾ ಆನಂದಪುರ ಸಾಹೇಬ ಗುರುದ್ವಾರವನ್ನು ಮಗ, ಸೊಸೆ, ಮಕ್ಕಳೊಡನೆ ತಾನೂ ಬಂದು ಸುತ್ತಿಸಿದರು.

ಹೊರಡುವ ಹಿಂದಿನ ದಿನ ನಾವು ಐದು ಜನ ಬೆಳಿಗ್ಗೆ ಕಸೌಲಿ ಹತ್ತಿರದ ಧರಮ್‌ಪುರದಿಂದ 'ಸಿಮ್ಲಾ'ಗೆ ಬಸ್ಸಿನಲ್ಲಿ ಹೋಗಿ ವಾಪಸ್ ಬರ್ತಾ ಸಿಮ್ಲಾ– ಕಾಲ್ಕಾ ಐತಿಹಾಸಿಕ ರೈಲಿನ ಪ್ರಯಾಣವನ್ನೂ ಮಾಡಿದೆವು. 'ಸಿಮ್ಲಾ'ದ ಒಂದು 'ಪಕ್ಷಿನೋಟ' ಸಿಕ್ಕಿತ್ತಷ್ಟೇ! ಮಾರನೆ ದಿನ ಮಗ ಅಂಬಾಲಾವರೆಗೆ ಬಂದು 'ಅಂಬಾಲಾ, ಹರಿದ್ವಾರ ರೈಲು ಹತ್ತಿಸಿದ. ಸಾಯಂಕಾಲ ಐದು ಗಂಟೆಗೆ ಹರಿದ್ವಾರ. ಗಂಗಾಘಾಟ್ ಹತ್ತಿರದ ಹೋಟೆಲ್‌ನಲ್ಲಿ ತಂಗಿದೆವು. ಪೇಟೆ ಬೀದಿ ಸುತ್ತಿ ಏಳೂವರೆ ಗಂಟೆ ಹೊತ್ತಿಗೆ ಸ್ನಾನಘಟ್ಟಕ್ಕೆ ಬಂದಾಗ ದೇಶದಲ್ಲೇ ಪ್ರಸಿದ್ಧವಾದ 'ಗಂಗಾ ಆರತಿ' ಮುಗಿದಿತ್ತು. ಸಾಯಂಕಾಲದ ಗಂಗಾಸ್ನಾನ ಮಾಡಿ ಹೋಟೆಲಿಗೆ ಹಿಂತಿರುಗಿದೆವು.

ಮಾರನೇ ದಿನ ಬೆಳಗ್ಗೆ ಎಂಟು ಗಂಟೆಗೆ ದರ್ಶನ್ ಬಸ್‌ನಲ್ಲಿ ಹರಿದ್ವಾರ–ಋಷಿಕೇಶ–ದೇವಪ್ರಯಾಗ ದರ್ಶನಾರ್ಥಿಯಾಗಿ ಹೊರಟೆವು. ಹರಿದ್ವಾರದಲ್ಲಿ ಸಪ್ತರ್ಷಿ ಆಶ್ರಮ, ಒಂದೆರಡು ದೇವಸ್ಥಾನಗಳನ್ನು ತೋರಿಸಿ ಬಸ್ಸು ಋಷಿಕೇಶ ಮಾರ್ಗವಾಗಿ ಘಟ್ಟದ ರಸ್ತೆಗಳಲ್ಲಿ ಸಾಗುತ್ತ 130 ಕಿ.ಮೀ. ದೂರದ ದೇವ ಪ್ರಯಾಗ ಸಂಗಮ, ಘಟ್ಟದಲ್ಲಿ ಮೇಲ್ರಸ್ತೆಗೆ ನಿಂತಾಗ 1 ಗಂಟೆ. ಸಾವಿರ ಮೆಟ್ಟಿಲುಗಳನ್ನು ಇಳಿದು ಸಂಗಮದ ಹತ್ತಿರ ಹೋಗಿ ಬರುವುದು ಅಸಾಧ್ಯದ ಮಾತು. ಗಂಗೋತ್ರಿಯಲ್ಲಿ ಹುಟ್ಟಿದ ಭಾಗೀರಥಿ ಮತ್ತು ಬದರಿಯಾಚೆ ಉಗಮಿಸಿದ ಅಲಕಾನಂದ ಎರಡು ಮಹಾನದಿಗಳು ಸೇರುವ ದೃಶ್ಯ ನೋಡುವುದೇ ರೋಮಾಂಚಕ ಅನುಭವ.

ವಾಪಸ್ಸು ಬರುತ್ತ ಲಕ್ಷ್ಮಣ ಝೂಲಾ, ಋಷಿಕೇಶದ ಸ್ವರ್ಣಾಶ್ರಮ, ಶಿವಾನಂದ ಆಶ್ರಮ ತೋರಿಸಿ ಬಸ್ಸಿನವರು ಸಾಯಂಕಾಲ ಆರೂವರೆ ಗಂಟೆಗೆ ಗಂಗಾ ಆರತಿ ನಡೆಯುವ ಸ್ನಾನಘಟ್ಟದೆದುರಿನ ಮೇಲ್ಸೆತುವೆಯ ಮೇಲೆ ಬಸ್ಸು ನಿಲ್ಲಿಸಿದರು. ಇನ್ನು ಅರ್ಧ ಗಂಟೆಯಲ್ಲಿ ಆರತಿ ನಡೆಯುವ ಜಾಗ ತಲುಪಬೇಕಾದರೆ ಮೆಟ್ಟಿಲಿಲ್ಲದ ಆಧಾರವಾಗಿ ಅಡ್ಡ ಕಂಬಿಗಳಿಲ್ಲದ 40 ಅಡಿ ಎತ್ತರದ ಇಳಿಜಾರು ಇಳಿಯಬೇಕು, ಅನೇಕರು ಇಳಿಯುತ್ತಿದ್ದರು. ನಾವೂ ಯಾರ್ಯಾರದೋ ಕೈಹಿಡಿದು ಇಳಿದೆವು. ನಾದಿನಿ, ಭಾವ ಕುಳಿತುಕೊಂಡೇ ಇಳಿದರು. ಅಂತೂ ಗಂಗಾ ಆರತಿಯ ಸಂಭ್ರಮ ನೋಡಿದೆವು. ಆ ನೆನಪುಗಳೇ ಸಿಹಿ ಸಿಹಿ. ■